# ‘ಉತ್ತಮ ಸಮಾಜಕ್ಕಾಗಿ ಮಕ್ಕಳ ಸಾಹಿತ್ಯ’

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಚೆನ್ನಿಗರಾಯಪುರದ ಸಿ.ಎಂ. ಗೋವಿಂದರೆಡ್ಡಿ, ಮಕ್ಕಳಸಾಹಿತ್ಯದ ಮೂವತ್ತಕ್ಕೂ ಅಧಿಕ ಕೃತಿಗಳನ್ನು ರಚಿಸಿದ್ದಾರೆ. ಶಾಲಾ ಶಿಕ್ಷಕರಾಗಿ, ನಂತರ ಕಾಲೇಜು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಈಗ ನಿವೃತ್ತಜೀವನ ನಡೆಸುತ್ತಿರುವ ಅವರಿಗೆ ಇತ್ತೀಚೆಗೆ ‘ಕರ್ನಾಟಕ ಬಾಲವಿಕಾಸ ಅಕಾಡೆಮಿ’, ಗೌರವಪ್ರಶಸ್ತಿ ಕೊಟ್ಟು ಪುರಸ್ಕರಿಸಿದೆ.

■ ಪದ್ಮನಾಭ ಭಟ್



◆ **ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಗೌರವ ಪ್ರಶಸ್ತಿ ದೊರಕಿರುವುದಕ್ಕೆ ಅಭಿನಂದನೆಗಳು...**

ಪ್ರಶಸ್ತಿ ಬಂದಿರುವುದಕ್ಕೆ ಸಂತೋಷವಾಗಿದೆ. ಮೊದಲಿನಿಂದಲೂ ನಾನು ಮಕ್ಕಳ ಸಾಹಿತ್ಯವನ್ನೇ ಹೆಚ್ಚು ಬರೆಯುತ್ತಿದ್ದೆ. ಅದನ್ನು ಬಾಲವಿಕಾಸ ಅಕಾಡೆಮಿ ಗುರ್ತಿಸಿ ಪ್ರಶಸ್ತಿ ನೀಡಿದಾಗ ನಾನು ಬರೆದಿದ್ದಕ್ಕೂ ಸಾರ್ಥಕವಾಯ್ತು ಅನಿಸಿತು.

◆ **ಮಕ್ಕಳ ಸಾಹಿತ್ಯ ಸೃಷ್ಟಿಗೆ ತೊಡಗಿಕೊಳ್ಳಲು ಪ್ರೇರಕವಾದ ಅಂಶಗಳು ಏನು?**

ನಾನು ಹಳ್ಳಿಗಾಡಿನಲ್ಲಿಯೇ ಹುಟ್ಟಿ ಬೆಳೆದವನು. ಪ್ರಾಥಮಿಕ ಶಾಲಾ ಶಿಕ್ಷಕನಾಗಿದ್ದವನು. ಅಲ್ಲಿ ಮಕ್ಕಳಿಗೆ ಪದ್ಯಗಳನ್ನು, ಕತೆಗಳನ್ನು ಪಾಠ ಮಾಡುತ್ತಿದ್ದಾಗ ನನಗೂ ಆ ರೀತಿ ಬರೆಯಬೇಕು ಅನಿಸಿತು. 1992ರಲ್ಲಿ ನಾನು ಮೊದಲ ಕೃತಿ ಬರೆದಿದ್ದು. ಅದು ‘ಪ್ರಜಾವಾಣಿ’ಯ ದೀಪಾವಳಿ ಶಿಶುಕಾವ್ಯ ಸ್ಪರ್ಧೆಯಲ್ಲಿ ಬಹುಮಾನ ಪಡೆದು ವಿಶೇಷಾಂಕದಲ್ಲಿ ಪ್ರಕಟಗೊಂಡಿತು. ಅದು ನನಗೆ ಮಕ್ಕಳಸಾಹಿತ್ಯ ರಚನೆಗೆ ಗಂಭೀರವಾಗಿ ತೊಡಗಿಕೊಳ್ಳಲು ಸ್ಫೂರ್ತಿ ನೀಡಿತು. ನಂತರ ನಾನು ಕಾಲೇಜು ಪ್ರಾಧ್ಯಾಪಕನಾಗಿ ಕೆಲಸ ಮಾಡುವಾಗಲೂ ಮಕ್ಕಳ ಸಾಹಿತ್ಯರಚನೆಯನ್ನು ಮುಂದುವರಿಸಿದೆ. ಕವನಸಂಕಲನ, ಕತೆಗಳು ಎಲ್ಲವನ್ನೂ ಬರೆದಿದ್ದೀನಿ. ಆದರೆ ಹೆಚ್ಚು ಮಕ್ಕಳಿಗಾಗಿಯೇ ಬರೆದೆ.

◆ **ಮಕ್ಕಳ ಸಾಹಿತ್ಯದ ಉದ್ದೇಶ ಮತ್ತು ಅಗತ್ಯಗಳೇನು?**

ಒಂದು ಒಳ್ಳೆಯ ಸಮಾಜ ನಿರ್ಮಾಣ ಆಗಬೇಕಾದರೆ, ಅದರ ನಾಗರಿಕರನ್ನು ಎಳವೆಯಿಂದಲೇ ಒಳ್ಳೆಯ ರೀತಿಯಲ್ಲಿ ರೂಪಿಸಬೇಕಾದ ಅಗತ್ಯ ತುಂಬಾ ಇದೆ. ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಲು ಮಕ್ಕಳಾಗಿದ್ದಾಗಲೇ ಅವರನ್ನು ಸಾಹಿತ್ಯದ ಮೂಲಕ ಪ್ರೇರೇಪಿಸಬೇಕು. ಗಿಡವಾಗಿ ಬಗ್ಗದೇ ಇರುವಂಥದ್ದು ಮರವಾಗಿ ಬಗ್ಗಬಹುದೇ? ಹಾಗಾಗಿ ಚಿಕ್ಕಂದಿನಲ್ಲಿಯೇ ಅವರಲ್ಲಿ ಒಳ್ಳೆಯ ಸಂಸ್ಕಾರ ರೂಢಿಸಬೇಕು ಎಂದೇ ನಾನು ಮಕ್ಕಳ ಸಾಹಿತ್ಯರಚನೆಗೆ ತೊಡಗಿಕೊಂಡಿದ್ದು.

ಬರುತ್ತ ಬರುತ್ತ ಸಮಾಜದಲ್ಲಿನ ನಾಗರಿಕರು ತುಂಬ ಕೆಟ್ಟದಾಗಿ, ಕ್ರೂರಿಗಳ ಹಾಗೆ ವರ್ತಿಸುತ್ತಿದ್ದಾರೆ. ಅತ್ಯಾಚಾರ, ಅನಾಚಾರಗಳು ಜಾಸ್ತಿ ಆಗುತ್ತಿವೆ. ಮಕ್ಕಳಲ್ಲಿ ಈ ಬಗ್ಗೆ ಅರಿವು ಮೂಡಿಸಿ, ಸದಭಿರುಚಿ ಬೆಳೆಸಿದರೆ ಅವರು ಒಳ್ಳೆಯ ನಾಗರಿಕರಾಗುತ್ತಾರೆ. ಸಾಹಿತ್ಯದಲ್ಲಿ ಯಾರಿಗೆ ಒಲವಿರುತ್ತದೆಯೋ ಅವರು ಉತ್ತಮ ಪ್ರಜೆಗಳಾಗಿ ರೂಪುಗೊಳ್ಳುತ್ತಾರೆ ಎನ್ನುವುದು ನನ್ನ ಸ್ವಂತ ಅನುಭವವೂ ಹೌದು. ಉತ್ತಮ ಸಾಹಿತ್ಯಕ್ಕೆ ಮಕ್ಕಳ ಸಾಹಿತ್ಯವೇ ತಳಹದಿ ಎಂಬುದು ನನ್ನ ನಂಬಿಕೆ.

◆ **ನಿಮ್ಮ ಸಾಹಿತ್ಯ ರಚನೆಗೆ ಮಕ್ಕಳಿಂದ ಸಿಕ್ಕ ಸ್ಪಂದನಗಳು ಹೇಗಿವೆ?**

ನನಗೆ ಮಕ್ಕಳಿಂದ ಒಳ್ಳೆಯ ಸ್ಪಂದನ ಸಿಕ್ಕಿದೆ. ಈಗ ಮಕ್ಕಳ ಕೈಗಳಿಗೆ ಮೊಬೈಲ್ ಬಂದಿದೆ. ಅವರು ಸ್ವಲ್ಪ ಓದಿನಿಂದ ವಿಮುಖರಾಗಿದ್ದೂ ನಿಜ. ಆದರೆ ಎಷ್ಟೋ ಶಾಲೆಯ ಶಿಕ್ಷಕರು ಮಕ್ಕಳಿಗೆ ಈಗಲೂ ಓದಿನ ಅಭಿರುಚಿ ರೂಪಿಸುತ್ತಿದ್ದಾರೆ. ಎಷ್ಟೋ ಶಿಕ್ಷಕರು ನನ್ನ ಸಾಹಿತ್ಯವನ್ನು ಅವರ ಶಾಲೆಯ ಮಕ್ಕಳಿಗೆ ಓದಿಸಿದ್ದಾರೆ. ಅವರೇ ಫೋನ್ ಮಾಡಿ ಮಕ್ಕಳಿಂದ ನನ್ನ ಜೊತೆಗೆ ಮಾತಾಡಿಸುತ್ತಿದ್ದಾರೆ. ಆರನೇ ತರಗತಿಯ ಪಠ್ಯದಲ್ಲಿ ನಾನು ರಚಿಸಿದ ‘ಮಂಗಳಗ್ರಹದಲ್ಲಿ ಪುಟ್ಟಿ’ ಎಂಬ ಪದ್ಯವೂ ಇದೆ. ಅದನ್ನು ರಾಜ್ಯದ ಎಲ್ಲ ಶಾಲೆಗಳಲ್ಲಿಯೂ ಶಿಕ್ಷಕರು ರಾಗವಾಗಿ ಹಾಡಿ ಮಕ್ಕಳಿಗೆ ಕಲಿಸುತ್ತಿದ್ದಾರೆ. ಅದನ್ನು ನಾನು ಕಣ್ಣಾರೆ ನೋಡಿದ್ದೀನಿ. ವಾಟ್ಸ್ಆ್ಯಪ್‌ನಲ್ಲಿಯೂ ಎಷ್ಟೋ ವಿಡಿಯೊಗಳು ಬರುತ್ತಿರುತ್ತವೆ. ಅವುಗಳನ್ನೆಲ್ಲ ನೋಡಿದಾಗ ಖುಷಿಯಾಗುತ್ತದೆ, ನಾನು ಬರೆದಿದ್ದು ಈ ರೀತಿ ಉಪಯೋಗ ಆಗುತ್ತಿದೆಯಲ್ಲ ಎಂದು.

◆ **ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಸದ್ಯದ ಪರಿಸ್ಥಿತಿ ಹೇಗಿದೆ?**

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮಕ್ಕಳ ಸಾಹಿತ್ಯಕ್ಕೆ ತುಂಬ ಗೌರವ, ಪ್ರೋತ್ಸಾಹ ಎರಡೂ ಇದೆ. ಆದರೆ ನಮ್ಮಲ್ಲಿ ಮಕ್ಕಳ ಸಾಹಿತ್ಯಕ್ಕೆ ಅನಾದರಕ್ಕೆ ಒಳಗಾಗಿದೆ. ಮಕ್ಕಳ ಸಾಹಿತ್ಯ ಗಂಭೀರ ಸಾಹಿತ್ಯವಲ್ಲ ಎಂಬ ಭಾವನೆ ಕೆಲವರಲ್ಲಿದೆ. ಅದು ತಪ್ಪು. ಮಕ್ಕಳಿಗಾಗಲಿ, ಹಿರಿಯರಿಗಾಗಲಿ ಅರ್ಥವಾಗುವ ರೀತಿ ಬರೆಯುವುದು ತುಂಬ ಮುಖ್ಯ. ಅರ್ಥವಾಗದ ರೀತಿಯ ಪಾಂಡಿತ್ಯ ಪ್ರದರ್ಶನ ಮಾಡುವುದು ನನಗೆ ಅಷ್ಟು ಇಷ್ಟವಿಲ್ಲ. ಸರಳವಾಗಿ ಬರೆಯುವುದೇ ನನಗಿಷ್ಟ.

◆ **ಮಕ್ಕಳ ಸಾಹಿತ್ಯವನ್ನು ಜನಪ್ರಿಯಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳೇನು?**

ಕರ್ನಾಟಕ ಬಾಲವಿಕಾಸ ಅಕಾಡೆಮಿಯಿಂದ ಸ್ವಲ್ಪಮಟ್ಟಿಗೆ ಮಕ್ಕಳ ಕಾರ್ಯಕ್ರಮಗಳು ಆಗುತ್ತಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಇದ್ದಹಾಗೆ ಮಕ್ಕಳಿಗಾಗಿಯೇ ಒಂದು ಸಾಹಿತ್ಯ ಅಕಾಡೆಮಿ ರೂಪುಗೊಂಡರೆ ಒಳ್ಳೆಯದು. ಅದು ಮಕ್ಕಳ ಸಾಹಿತ್ಯವನ್ನು ಪ್ರೋತ್ಸಾಹಿಸಬೇಕು ಮತ್ತು ಎಲ್ಲ ಮಕ್ಕಳಿಗೂ ಅದು ತಲುಪುವ ವ್ಯವಸ್ಥೆ ಮಾಡಬೇಕು. ಶಾಲೆಗಳಲ್ಲಿ ಮಕ್ಕಳಲ್ಲಿ ಓದುವ ಅಭಿರುಚಿ ಬೆಳೆಸುವ ಕ್ರಮಗಳನ್ನು ಕೈಗೊಳ್ಳಬೇಕು. ಎಲ್ಲ ಶಾಲೆಗಳಲ್ಲಿಯೂ ಉತ್ತಮ ಗ್ರಂಥಾಲಯಗಳನ್ನು ರೂಪಿಸಬೇಕು.

◆ **ಹೊಸ ಕೃತಿ ರಚನೆಯಲ್ಲಿ ತೊಡಗಿರುವಿರಾ?**

ಮಹಾಭಾರತ ಕಾವ್ಯವನ್ನು ಮಕ್ಕಳಿಗಾಗಿಯೇ ರಚನೆ ಮಾಡಿ ‘ಮತ್ತೊಂದು ಮಹಾಭಾರತ’ ಎಂಬ ಹೆಸರಿನಲ್ಲಿ 2015ರಲ್ಲಿ ಪ್ರಕಟಿಸಿದ್ದೆ. ಈಗ ರಾಮಾಯಣ ಮಹಾಕಾವ್ಯವನ್ನು ಮಕ್ಕಳಿಗಾಗಿ ರಚನೆ ಮಾಡುತ್ತಿದ್ದೇನೆ. ಅದು ಪೂರ್ಣಗೊಳ್ಳಲು ಇನ್ನೂ ಎರಡು ಮೂರು ವರ್ಷ ಬೇಕಾಗಬಹುದು. ಭಗವದ್ಗೀತೆಯನ್ನೂ ‘ಗೋವಿಂದಗೀತೆ’ ಎಂಬ ಹೆಸರಿನಲ್ಲಿ ಮಕ್ಕಳಿಗಾಗಿ ಸರಳ ಅನುವಾದ ಮಾಡಿದ್ದೇನೆ. ಅದು ಇನ್ನೇನು ಪ್ರಕಟವಾಗಲಿದೆ.

ಪ್ರತಿಕ್ರಿಯಿಸಿ: feedback@sudha.co.in